# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಮುಳಬಾಗಿಲು

**ಸಿಸಿ ಸಂಖ್ಯೆಃ197ಃ2013**

**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕಃ 15-09-2015 ಸಿಡಬ್ಲ್ಯುಃ14, ಪಿಡಬ್ಲ್ಯುಃ11**

| | | |
|---|---|---|
| ಹೆಸರು | ಃ | ಶ್ರೀ ಹುಲಗನಾಥನ್ |
| ತಂದೆಯ ಹೆಸರು | ಃ | ಶ್ರೀ ಪೆರುಮಾಳ್ |
| ವಯಸ್ಸು | ಃ | 52 ವರ್ಷ |
| ಉದ್ಯೋಗ | ಃ | ಎಪಿಎಸ್‌ಆರ್‌ಟಿಸಿ ನಿರ್ವಾಹಕ |
| ವಾಸಸ್ಥಳ | ಃ | ಎಸ್.ಎಸ್.ಕೊಂಡ, ಚಿತ್ತೂರು ಜಿಲ್ಲೆ. |

## ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

1. ಆರೋಪಿ ನನಗೆ ಗೊತ್ತು. ದಿಃ 14.9.2012 ರಂದು ರಾತ್ರಿ 9ರ ಸಮಯಕ್ಕೆ ತಿರುಪತಿಯನ್ನು ಬಿಟ್ಟು ಬೆಂಗಳೂರಿಗೆ ಬರಲು ಆರೋಪಿ ಮತ್ತು ನಾನು ಎಪಿಎಸ್‌ಆರ್‌ಟಿಸಿ ಬಸ್‌ನಲ್ಲಿ ಬರುತ್ತಿದ್ದು, ಅಂದು ಆರೋಪಿಯು ಸದರಿ ಬಸ್ಸಿನ ಚಾಲಕನಾಗಿದ್ದು, ನಾನು ನಿರ್ವಾಹಕನಾಗಿದ್ದೆ. ಬೆಳಗಿನ ಜಾವ 2.30 ರಿಂದ 2.45ರ ಸಮಯದಲ್ಲಿ ನಾನು ಬಸ್ಸಿನ ಹಿಂಭಾಗದ ನಿರ್ವಾಹಕನ ಸೀಟಿನಲ್ಲಿ ಕುಳಿತುಕೊಂಡಿರಬೇಕಾದರೆ ಜೋರಾಗಿ ಶಬ್ದ ಬಂದಿದ್ದು, ನನ್ನ ಎಡಗಾಲಿನ ಹೆಬ್ಬೆರಳಿಗೆ ಮತ್ತು ತಲೆಗೆ ಹಾಗು ಎಡಗಾಲಿನ ಮೊಣಕಾಲಿಗೆ ಏಟಾಗಿತ್ತು. ಸದರಿ ಅಪಘಾತವು ಹೇಗೆ ಆಗಿರುತ್ತದೆಯೆಂದು ನನಗೆ ಗೊತ್ತಿಲ್ಲ ಆದರೆ ಕಂಟೈನರ್ ಲಾರಿಗೆ ಹಿಂಬದಿಯಿಂದ ಡಿಕ್ಕಿಯಾಗಿರುವುದು ನನಗೆ ತದನಂತರ ಗೊತ್ತಾಯಿತು. ನಂತರ ನಮ್ಮನ್ನು ಕೋಲಾರದ ಆರ್‌ಎಲ್ ಜಾಲಪ್ಪ ಆಸ್ಪತ್ರೆಗೆ ಸಾಗಿಸಿರುತ್ತಾರೆ. ಸದರಿ ಅಪಘಾತವು ಯಾರ ತಪ್ಪಿನಿಂದ ಆಗಿದೆಯೆಂದು ನನಗೆ ಗೊತ್ತಿಲ್ಲ. ಈ ಬಗ್ಗೆ ಪೊಲೀಸರು ನನ್ನ ಹೇಳಿಕೆಯನ್ನು ದಾಖಲಿಸಿಕೊಂಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸುವಂತೆ ಮಾನ್ಯ ಎಪಿಪಿ ರವರು ಕೋರಿದ ಮೇರೆಗೆ ಅನುಮತಿ ನೀಡಲಾಯಿತು).**

## ಪಾಟಿ ಸವಾಲುಃ ಮಾನ್ಯ ಎಪಿಪಿ ರವರಿಂದಃ

2. ನಾನು ಮತ್ತು ಆರೋಪಿ ಅಂದು ಕರ್ತವ್ಯ ನಿರ್ವಹಿಸುತ್ತಿದ್ದ ಬಸ್ಸಿನ ಸಂಖ್ಯೆ ಎಪಿ-28-ಜೆಡ್-5033 ಆಗಿತ್ತೆಂದರೆ ಸರಿ. ಅಂದು ಆರೋಪಿಯು ಸದರಿ ಬಸ್ಸನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಮುಳಬಾಗಲಿನ ಕಾಂತರಾಜ ಸರ್ಕಲ್‌ನ ಬಳಿ ರಸ್ತೆಯ ಎಡಬದಿಯಲ್ಲಿ ನಿಲ್ಲಿಸಿದ್ದ ಕಂಟೈನರ್ ಲಾರಿ ಸಂಖ್ಯೆ ಟಿಎನ್-72-ಯು-5099ಕ್ಕೆ ಹಿಂದಿನಿಂದ ಡಿಕ್ಕಿ ಹೊಡೆಸಿದ ಪರಿಣಾಮ ಸದರಿ ಬಸ್‌ನಲ್ಲಿದ್ದ ಪ್ರಯಾಣಿಕರಿಗೆ ಗಾಯಗಳಾಗಿದ್ದು, ಒಬ್ಬರು ಸ್ಥಳದಲ್ಲಿಯೇ ತೀರಿಕೊಂಡಿದ್ದು ಮತ್ತು ಮತ್ತೊಬ್ಬರು ಕೋಲಾರದ ಆರ್‌ಎಲ್ ಜಾಲಪ್ಪ ಆಸ್ಪತ್ರೆಯಲ್ಲಿ ತೀರಿಕೊಂಡಿರುತ್ತಾರೆಂದು ಸೂಚಿಸುವುದು ಸರಿಯಲ್ಲ. ಸದರಿ ಅಪಘಾತವು ಆರೋಪಿಯ ತಪ್ಪಿನಿಂದ ಆಗಿರುತ್ತದೆಯೆಂದು ಸೂಚಿಸುವುದು ಸರಿಯಲ್ಲ. ಈ ಬಗ್ಗೆ ದಿಃ 29.10.2012 ರಂದು ನಾನು ಮೇಲ್ಕಂಡ ………. ಕ್ರಮ ಜರುಗಿಸಲು ಕೋರುತ್ತೇನೆಂದು ನಿಪಿ-8ರಂತೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆಂದು ಸೂಚಿಸುವುದು ಸರಿಯಲ್ಲ. ಆರೋಪಿಯು ನನ್ನ ಸಹೋದ್ಯೋಗಿಯಾದ ಕಾರಣ ಸತ್ಯವನ್ನು ಹೇಳಿದರೆ ಆರೋಪಿಗೆ ತೊಂದರೆಯಾಗುತ್ತದೆಯೆನ್ನುವ ಕಾರಣಕ್ಕಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದು ಸೂಚಿಸುವುದು ಸರಿಯಲ್ಲ.

## ಪಾಟಿ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಂ.ವಿ. ರವರಿಂದಃ

3. ಎಪಿಎಸ್‌ಆರ್‌ಟಿಸಿ ಬಸ್ಸುಗಳಲ್ಲಿ ವೇಗ ನಿಯಂತ್ರಕ ಸಾಧನಗಳನ್ನು ಅಳವಡಿಸಿರುತ್ತಾರೆಂದರೆ ಸರಿ. ಆ ರೀತಿ ಸಾಧನ ಅಳವಡಿಸಿರುವುದರಿಂದ ವೇಗವಾಗಿ ಹೋಗಲು ಸಾಧ್ಯವಿಲ್ಲವೆಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಸದರಿ ಸಂಗತಿಯು ಮೆಕ್ಯಾನಿಕ್‌ಗೆ ಗೊತ್ತು, ನನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ಅಪಘಾತವಾದ ಕಾಲಕ್ಕೆ ಪ್ರಯಾಣಿಕರಲ್ಲೊಬ್ಬರು ನನಗೆ ವಾಂತಿ ಬರುತ್ತಿದೆ ಸೀಟನ್ನು ಬಿಟ್ಟುಕೊಡಿಯೆಂದು ಕೇಳಿದ ಮೇರೆಗೆ ನಾನು ಸೀಟನ್ನು ಬಿಟ್ಟುಕೊಟ್ಟು ಆಕಡೆಗೆ ಬರುವಾಗ ಅಪಘಾತ ಸಂಭವಿಸಿರುತ್ತದೆ. ಅಂದು ಸದರಿ ಕಂಟೈನರ್ ಲಾರಿಗೆ ಹಿಂಬದಿಯಲ್ಲಿ ಇಂಡಿಕೇಟರ್ ದೀಪವನ್ನು ಹಾಕಿದ್ದರೋ ಅಥವಾ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಸದರಿ ಕಂಟೈನರ್ ಲಾರಿಯು ರಸ್ತೆಯ ಮೇಲಿತ್ತೆಂದರೆ ನನಗೆ ಗೊತ್ತಿಲ್ಲ. ಸದರಿ ಕಂಟೈನರ್ ಲಾರಿಯನ್ನು

ಅದರ ಚಾಲಕ ರಸ್ತೆಯ ಮೇಲೆ ನಿಲ್ಲಿಸಿದ ಕಾರಣ ಸದರಿ ಅಪಘಾತ ಸಂಭವಿಸಿದ್ದು ಆರೋಪಿಯ ತಪ್ಪಿನಿಂದ ಅಲ್ಲವೆಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ.

**ಮರು ವಿಚಾರಣೆಃ** ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)**
**ಓದಿ ಹೇಳಿ ಕೇಳಿ ಸರಿ ಇದೆ.**

**(ರವಿಕುಮಾರ್ ಹೆಚ್.ಆರ್.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,**
**ಮುಳಬಾಗಲು.**